



ಸಸ್ಯಗಳು ಉದ್ದವಾಗಿ ಬೆಳೆಯಲಿಕ್ಕೆ ಜಿಬ್ಬರೆಲಿನ್ ಪ್ರಚೋದನೆಯೇ ಕಾರಣ

ಆಕ್ಸಿನ್. ಡಾರ್ವಿನ್ ತನ್ನ ಮಹಾಯಾನವನ್ನು ಮುಗಿಸಿ ವಿಕಸನದ ತತ್ವಗಳನ್ನು ಮಂಡಿಸಿ, ಸಸ್ಯಶರೀರ ಶಾಸ್ತ್ರದ ಬಗ್ಗೆ ಒಲವು ತೋರಿಸಿದ್ದ ಗಳಿಗೆ. ಕಿಟಕಿಯಿಂದ ಇಣುಕುವ ಬೆಳಕಿನ ಕಡೆ ಕ್ಯಾನರಿ ಹುಲ್ಲಿನ ಎಳೆ ಸಸ್ಯಗಳು ತಮ್ಮದೇ ರೀತಿಯಲ್ಲಿ ಬಾಗಿ ಚಲಿಸುತ್ತವೆ ಎಂಬುದನ್ನು ಗಮನಿಸಿದ್ದ. ಮುಂದೆ ವಿಜ್ಞಾನಿಗಳು ಇದನ್ನು ಆಕ್ಸಿನ್‌ನ ಪರಿಣಾಮವೆಂದು ದೃಢೀಕರಿಸಿದರು. ಸಸ್ಯಗಳ ಸರ್ವತೋಮುಖ ಬೆಳವಣಿಗೆಗೆ ಆಕ್ಸಿನ್ ಉಳಿದೆಲ್ಲಾ ಹಾರ್ಮೋನ್‌ಗಳಿಗಿಂತಲೂ ಹೆಚ್ಚು ಅವಶ್ಯಕ. ಆಕ್ಸಿನ್‌ಗಳ ಮಹತ್ವವನ್ನು ಕೆಳಗಿನಂತೆ ವಿವರಿಸಬಹುದು:

- ದಾಸವಾಳ, ಸೇವಂತಿಗೆ, ಡೇರೆಯಂತಹ ಹೂ ಬಿಡುವ ಸಸ್ಯಗಳಲ್ಲಿ ಕೆಲವೊಮ್ಮೆ ತುದಿ ಚಿವುಟುವುದನ್ನು ಕೇಳಿರುತ್ತೀರಿ. ತುದಿ ಚಿವುಟದ ಸಸ್ಯಗಳು ಹೂ ಬಿಡದೆ ಉದ್ದಕ್ಕೆ ಬೆಳೆಯುವುದನ್ನೂ, ತುದಿ ಚಿವುಟಿದ ಸಸ್ಯಗಳು ಕವಲುಗಳನ್ನು ಬಿಟ್ಟು ಪೊದೆಯಾಗಿ ಬಹಳಷ್ಟು ಹೂ ಬಿಡುವುದನ್ನು ನೋಡಿರುತ್ತೀರಿ. ಇದು ಆಕ್ಸಿನ್‌ನ ಮಹಿಮೆ. ಸಸ್ಯಗಳಲ್ಲಿ ಆಕ್ಸಿನ್ ಕಂಡುಬರುವುದು ಸಸ್ಯದ ತುದಿಯ ಚಿಗುರಿನಲ್ಲಿ. ಹೆಚ್ಚಿನ ಪ್ರಮಾಣದಲ್ಲಿ ಚಿಗುರಿನಲ್ಲಿ ಕೇಂದ್ರೀಕೃತವಾದ ಆಕ್ಸಿನ್ ಬುಡದ ಕವಲುಗಳ ಬೆಳವಣಿಗೆಯನ್ನು ಕುಂಠಿಸುತ್ತದೆ ಮತ್ತು ಹೂವಿನ ಬೆಳವಣಿಗೆಯನ್ನು ಮುಂದೂಡುತ್ತದೆ. ಹಾಗಾಗಿ ತುದಿ ಚಿವುಟುವ ಮೂಲಕ ಆಕ್ಸಿನ್‌ನಿಂದ ಮುಕ್ತಿ ಪಡೆಯುವ ರೂಢಿ ಅಲಂಕಾರಿಕ ಸಸ್ಯಗಳಲ್ಲಿ ಚಾಲ್ತಿಯಲ್ಲಿದೆ.
- ಕಟಿಂಗ್ಸ್‌ಗಳಿಗೆ ಬೇರು ಬರಿಸಲು ಹಚ್ಚುವ 'ರೂಟಿಂಗ್ ಪೌಡರ್'ನಲ್ಲಿರುವುದು ಕೂಡ ಆಕ್ಸಿನ್. ಆಕ್ಸಿನ್‌ಗಳು ಗಾಯವಾದಂತಹ ಜಾಗದಲ್ಲಿ ನಾರಿನಂತ ಹುಸಿ ಬೇರುಗಳ ಬೆಳವಣಿಗೆಯನ್ನು ಉತ್ತೇಜಿಸುತ್ತವೆ. ಇದೇ ತತ್ವವನ್ನು ಅನುಸರಿಸಿ ಕಟಿಂಗ್ಸ್‌ಗಳಲ್ಲಿ ವೇಗವಾಗಿ ಬೇರು ತರಿಸಲು ಸಿಂಥೆಟಿಕ್ ರೂಪದ ಆಕ್ಸಿನ್ / ರೂಟಿಂಗ್ ಪೌಡರ್ ಬಳಸಲಾಗುತ್ತದೆ.
- ಬೇರುಗಳೇಕೆ ಕೆಳಮುಖವಾಗಿ ಬೆಳೆಯುತ್ತವೆ ಮತ್ತು ಚಿಗುರುಗಳೇಕೆ ಮೇಲ್ಮುಖವಾಗಿ ಬೆಳೆಯುತ್ತವೆ ಎಂದು ಯಾವಾಗಲಾದರೂ ಪ್ರಶ್ನಿಸಿಕೊಂಡಿದ್ದೀರಾ? ಈ ಪ್ರಕ್ರಿಯೆಯ ಕೇಂದ್ರದಲ್ಲಿರುವುದು ಕೂಡ ಆಕ್ಸಿನ್‌ಗಳೇ.
- ಗಿಡಗಳ ಬಾಗುವಿಕೆ, ಸೂರ್ಯನ ಕಡೆಗಿನ ಚಲನೆಯನ್ನು ನಿರ್ವಹಿಸುವುದು ಕೂಡ ಆಕ್ಸಿನ್.
- ಕತ್ತಿಯೋ, ಇನ್ನಾವುದೋ ಹರಿತವಾದ ವಸ್ತು ತಾಗಿಯೋ ಗಿಡಗಳಿಗೆ ಗಾಯವಾದಾಗ ನೆರವಿಗೆ ಧಾವಿಸುವುದು ಆಕ್ಸಿನ್. ಗಾಯದ ಜಾಗದಲ್ಲಿ ಕ್ಷಿಪ್ರವಾಗಿ ಕೋಶಗಳನ್ನು ವಿಭಜಿಸಿ, ತೇಪೆ ಹಚ್ಚಿದ ರೀತಿಯಲ್ಲಿ ಗಾಯವನ್ನು ಮಾಯವಾಗಿಸುವುದು ಆಕ್ಸಿನ್‌ನ ಕೆಲಸ. 'ಕಸಿ' ಕಟ್ಟಿದಾಗ ಉಂಟಾದ ಗಾಯವನ್ನೂ ಆಕ್ಸಿನ್ ಗುಣವಾಗಿಸುತ್ತದೆ.

## ನೀಳಕಾಯಕ್ಕೆ ಜಿಬ್ಬರೆಲಿನ್

ಜಪಾನಿನಲ್ಲಿ 19ನೇ ಶತಮಾನದ ಅಂತ್ಯಕ್ಕೆ ಭತ್ತದ ಬೆಳೆಯಲ್ಲಿ ವಿಚಿತ್ರವಾದ ರೋಗವೊಂದು ಕಾಣಿಸಿಕೊಂಡಿತ್ತು. ಭತ್ತದ ಸಸಿಗಳು ದುರ್ಬಲವಾಗಿ ಹುಚ್ಚು ಹುಚ್ಚಾಗಿ ಸಪೂರ ಕಡ್ಡಿಯಂತೆ ತೆನೆ ಮೂಡದೆ ಬಂಜರಾಗಿ ಬೆಳೆಯುತೊಡಗಿದ್ದವು. ಭತ್ತದ ಇಳುವರಿ ತೀವ್ರವಾಗಿ ಕುಸಿದಿತ್ತು. ಸಸ್ಯ ರೋಗ ಶಾಸ್ತ್ರಜ್ಞರು 'ಜಿಬ್ಬರೆಲ್ಲಾ' ಎಂಬ ಶಿಲೀಂಧ್ರ ಈ ರೋಗಕ್ಕೆ ಕಾರಣ